**ಗಲ್ಲಾಪೆಟ್ಟಿಗೆ** ತುಂಬಿಸುವುದನ್ನು ಗಮನದಲ್ಲಿ ಇಟ್ಟುಕೊಂಡು, ಕನ್ನಡ ಚಿತ್ರರಂಗದ ನಾಲ್ಕು ಕಂಬಗಳೆಂದು ಈ ಹೊತ್ತು ಯಾವ ಕಲಾವಿದರನ್ನಾದರೂ ಗುರ್ತಿಸುವುದು ಸಾಧ್ಯವಿದೆಯೆ? ದರ್ಶನ್, ಯಶ್, ಸುದೀಪ್ ಹಾಗೂ ಶಿವರಾಜ್‌ಕುಮಾರ್ ಅವರ ಹೆಸರುಗಳನ್ನು ಸುಲಭಕ್ಕೆ ಪಟ್ಟಿ ಮಾಡಬಹುದು. 'ಶೆಟ್ಟಿತ್ರಯ'ರಾದ ರಕ್ಷಿತ್, ರಿಷಬ್ ಹಾಗೂ ರಾಜ್‌ರ ಮಂಗಳೂರು ಗ್ಯಾಂಗನ್ನು ಸೇರಿಸಿಕೊಂಡು, ನಾಲ್ಕರ ನಡುವಿನ ಐದನೇ ಸ್ತಂಭ ಎಂದೂ ಹೇಳಬಹುದೇನೊ?

ತಾರಾ ವರ್ಚಸ್ಸಿನ ಕಲಾವಿದರ ಮೂಲಕ ಚಿತ್ರೋದ್ಯಮವನ್ನು ಗುರ್ತಿಸುವುದು ಎಲ್ಲ ದೇಶ–ಕಾಲಗಳ ಸಿನಿಮಾ ಚರಿತ್ರೆಯಲ್ಲಿನ ಸಾಮಾನ್ಯ ಸಂಗತಿ. ಒಂದು ಚಿತ್ರರಂಗದ ವಹಿವಾಟಿನಲ್ಲಿ ಉತ್ಸಾಹ ಕಾಣಿಸುವುದು ಇಲ್ಲವೇ ಮಬ್ಬು ಆವರಿಸುವುದು ತಾರಾ ವರ್ಚಸ್ಸಿನ ನಾಯಕನಟರ ಸಿನಿಮಾಗಳ ಮೂಲಕವೇ ಆದುದರಿಂದ, ಜನಪ್ರಿಯ ನಟನಟಿಯರನ್ನು ಚಿತ್ರೋದ್ಯಮದ ಆಸ್ತಿಯೆಂದೇ ಭಾವಿಸಲಾಗುತ್ತದೆ. ಈ ನಟರು ಸಕ್ರಿಯವಾಗಿದ್ದಾಗ ಚಿತ್ರೋದ್ಯಮವೂ ಲವಲವಿಕೆಯಿಂದಿರುತ್ತದೆ; ಮಂಕಾದಾಗ ಆ ಮಬ್ಬು ಉದ್ಯಮವನ್ನೂ ಕವಿಯುತ್ತದೆ. ಈ ಸಮೀಕರಣವನ್ನು ನೇಪಥ್ಯಕ್ಕೆ ಸರಿಯುತ್ತಿರುವ 2023ರ ಕನ್ನಡ ಚಿತ್ರೋದ್ಯಮಕ್ಕೆ ಅನ್ವಯಿಸಿದರೆ, ಈ ಹೊತ್ತಿನ ಕನ್ನಡ ಚಿತ್ರರಂಗದ ಸ್ಥಿತಿಗತಿಯ ಅಂದಾಜು ದೊರೆಯಬಹುದು.

ಮೂರು ವರ್ಷಗಳ ಅವಧಿಯಲ್ಲಿ ದರ್ಶನ್ ಅವರ ತೆರೆಕಂಡಿರುವ ಸಿನಿಮಾಗಳ ಸಂಖ್ಯೆ ಎರಡು. 2021ರಲ್ಲಿ 'ರಾಬರ್ಟ್' ತೆರೆಕಂಡ ನಂತರ ದರ್ಶನ್ ಸುದ್ದಿಯಲ್ಲಿದ್ದುದೆಲ್ಲ ಸಿನಿಮೇತರ ಕಾರಣಗಳಿಂದಲೇ. 2022ರಲ್ಲಿ ದರ್ಶನ್ ನಟನೆಯ ಒಂದು ಸಿನಿಮಾವಷ್ಟೇ ತೆರೆಕಂಡಿದ್ದು, ಮಾಧ್ಯಮದವರ ಜೊತೆಗೆ ಮಾತ್ರವಲ್ಲ, ಪ್ರೇಕ್ಷಕರ ಜೊತೆಗೂ ಅವರು ಮುನಿಸಿಕೊಂಡಿದ್ದಾರೇನೋ ಎನ್ನುವ ಅನುಮಾನ ಹುಟ್ಟಿಸುವಂತಿತ್ತು. 2023ರಲ್ಲಿ 'ಕ್ರಾಂತಿ' ಸಿನಿಮಾ ತೆರೆಕಂಡಿತಾದರೂ, ಅದು ಗಲ್ಲಾಪೆಟ್ಟಿಗೆಯಲ್ಲಿ ಕ್ರಾಂತಿಯನ್ನೇನೂ ಉಂಟುಮಾಡಲಿಲ್ಲ.

ಸಿನಿಮಾಗಳ ಮಟ್ಟಿಗೆ ಸುದೀಪ್ ಗ್ರಾಫ್ ದರ್ಶನ್‌ರಿಗಿಂತ ಭಿನ್ನವಾಗಿಯೇನೂ ಇಲ್ಲ. ಮೂರು ವರ್ಷಗಳಲ್ಲಿ ತೆರೆಕಂಡಿರುವ ಅವರ ಸಿನಿಮಾಗಳು ಎರಡು, ಕೊಸರಿಗೆ ಇನ್ನೊಂದು, ಅಷ್ಟೇ. 2021ರಲ್ಲಿ 'ಕೋಟಿಗೊಬ್ಬ 3', 2022ರಲ್ಲಿ 'ವಿಕ್ರಾಂತ್ ರೋಣ' ತೆರೆಕಂಡವು. ಅತಿಥಿ ನಟನಾಗಿ ನಟಿಸಿದ 'ಕಬ್ಜ' ಸಿನಿಮಾದ ಮೂಲಕ 2023ರಲ್ಲೂ ಚಿತ್ರಮಂದಿರದಲ್ಲಿ ಸುದೀಪ್ ಮುಖ ಕಾಣಿಸಿಕೊಂಡಿತು. ಆದರೆ, ಈ ಮೂರೂ ಸಿನಿಮಾಗಳು ಸುದೀಪ್‌ರ ಯಶಸ್ಸಿನ ಗ್ರಾಫ್‌ಗೆ ಹೊಳಪು ತರುವಂತೇನೂ ಇರಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಸಿನಿಮಾಗಳಿಗಿಂತಲೂ ಕಿರುತೆರೆಯ 'ಬಿಗ್ ಬಾಸ್' ರಿಯಾಲಿಟಿ ಶೋ ವೇದಿಕೆಯ ಮೇಲೆಯೇ ಸುದೀಪ್ ಅವರನ್ನು ಚಿತ್ರರಸಿಕರು ನೋಡಿರುವುದೇ ಹೆಚ್ಚು.



'ಕಬ್ಜ' ಚಿತ್ರದಲ್ಲಿ ಉಪೇಂದ್ರ



ಬ್ಯಾಡ್ ಮ್ಯಾನರ್ಸ್ ಸಿನಿಮಾದಲ್ಲಿ ನಟ ಅಭಿಷೇಕ್